ಮೇಡಂ, ವಿಸ್ಡಮ್ ಹಲ್ಲಿಗೆ ಏನೂ ಮಾಡಕ್ಕಾಗಲ್ಲ. ಅದು ಇರೋತಂಕ ಇರುತ್ತೆ, ಸಮಸ್ಯೆ ಆದರೆ ಕೀಳಲೇಬೇಕು' ಎಂದರು ಹೊಳೆವ ಹಲ್ಲುಗಳ ಡಾಕ್ಟರು. 'ಮತ್ತೆ ಅದನ್ನು ತೆಗೆದು ಹಾಕಿಬಿಟ್ಟರೆ... ಅದರಿಂದ ಏನೂ ಉಪಯೋಗ ಇಲ್ವ?' ಕೇಳಿದೆ. ಅದೇ ನಗುವಿನಲ್ಲಿ ಅವರೆಂದರು, 'ಅದನ್ನ ತೆಗೆದರೆ ಏನೂ ಸಮಸ್ಯೆ ಇಲ್ಲ... ಬನ್ನಿ'. ತೆಗೆದರೆ ಏನೂ ಸಮಸ್ಯೆಯಿಲ್ಲ ಅಂದರೆ ಇದ್ದೂ ಏನೂ ಉಪಯೋಗ ಇಲ್ಲ ಅಂತನಾ? ಉಪಯೋಗ ಇಲ್ಲ ಅನ್ನೋದಾದ್ರೆ ಅದು ಸೃಷ್ಟಿ ಆಗಿದ್ದಾದರೂ ಯಾಕೆ! ಅಂತ ನನ್ನೊಳಗಿನ ಶಿಕ್ಷಕಿಯ ಪ್ರಶ್ನೆ. ಮುಂದಿನದ್ದನ್ನ ಊಹಿಸಿಯೇ ಹೆದರಿ ಕಂಗಾಲಾಗಿದ್ದ ನನ್ನ ನೋಡುತ್ತ ಅವರು, 'ನೋವಾಗದ ಹಾಗೆ ತೆಗೀತೀನಿ, ಮುಂದಿನ ವಾರ ಸಂಕ್ರಾಂತಿ ಹಬ್ಬ ಮುಗಿಸಿ ತೆಗೆಸಿ, ಬರುವಾಗ ನಿಮ್ಮ ಮನೆಯವರನ್ನ ಕರಕೊಂಡು ಬನ್ನಿ' ಅಂತ ಬೇರೆ ಸೇರಿಸಿದರು. ಇಷ್ಟೆಲ್ಲ ಮುಂಜಾಗ್ರತಾ ನಿಯಮಗಳನ್ನು ಅವರು ಹೇಳುವಾಗಲೇ ಮುಂದೇನು ಕಾದಿದೆ ಅಂತ ನನ್ನ ಅಂತರಂಗದ ವಿವೇಕ ಚೀರುತ್ತಿತ್ತು.

ಹಲ್ಲಿಗೆ ಸಂಬಂಧಿಸಿದ ಕೆಲವು ಸಂಗತಿಗಳ ಕಾರಣದಿಂದ ನಮ್ಮ ಕುಟುಂಬದಲ್ಲಿ ನನಗೆ ಪುರಾಣ ಸದೃಶ ಸ್ಥಾನ ಸಿಕ್ಕಿದೆ ಅಂದರೆ ಉತ್ಪ್ರೇಕ್ಷೆಯಾಗಲಾರದು. ಕವಿತೆ ಮತ್ತು ಇತರ ಬರವಣಿಗೆಯಲ್ಲಿ ತೋರುವ ನನ್ನ ಪ್ರತಿಭೆಯ ಹಿಂದೆ ಹಲ್ಲಿನ ಈ ಕಾರಣ ಇದ್ದಿರಬಹುದು ಎಂದು ಹಲವರ ಗುಮಾನಿ ಎಂಬ ವಿಷಯವೂ ನನ್ನ ಕಿವಿಗೆ ಬಿದ್ದಿದೆ. ಅದೇನೆಂದರೆ, ಮುಂಭಾಗದ ಕೆಳ ವಸಡಿನ ಹಾಲುಹಲ್ಲುಗಳು ತೀರಾ ಇತ್ತೀಚಿನ ತನಕ ಬೀಳದೆ ಇದ್ದುದು. ಅವು ಬೀಳುವತನಕ ಕುಟುಂಬದ ಕಾರ್ಯಕ್ರಮಗಳಲ್ಲಿ ನಾವೆಲ್ಲ ಸಹೋದರ, ಸಹೋದರಿಯರು ಸೇರಿದಾಗ ಅಕಸ್ಮಾತ್ ಏನಾದರೂ ಹಲ್ಲಿನ ಪ್ರಸ್ತಾಪ ಬಂದಾಗ ನನ್ನ ಈ ಹಲ್ಲುಗಳ ಪ್ರದರ್ಶನ ಸಮಾರಂಭ ಇದ್ದೇ ಇರುತ್ತಿತ್ತು. 'ಅಯ್ಯೋ ಎಷ್ಟು ಮುದ್ದಾಗಿದಾವೆ... ಚಂದ...' ಇತ್ಯಾದಿ ಹೊಗಳಿಕೆ ಸ್ತುತಿಗಳು ಸಹಜವಾಗಿ ಬೀಳದ ಆ ಎರಡು ಇಲಿಹಲ್ಲುಗಳಿಗೆ ಬರುತ್ತಿದ್ದವು. ನಾಲ್ಕು ಜನರ ನಡುವೆ ಅವಕ್ಕೆ ಅಷ್ಟು ಪ್ರಾಮುಖ್ಯತೆ ಮತ್ತು ಶಕ್ತಿ ದಕ್ಕುವಾಗಲೆಲ್ಲ ನನಗೆ 'ಕುಸುಮಬಾಲೆ'ಯಲ್ಲಿ ಕುಸುಮನ ವರ್ಣನೆ ಮಾಡೋ ಜೋತಮ್ಮದಿರ ಮಾತುಗಳು ಮನಸ್ಸಿಗೆ ಬಂದು ನನ್ನ ಹಲ್ಲುಮರಿಗಳ ಮೇಲೆ ಮುದ್ದು ಉಕ್ಕುಕ್ಕಿ ಬರುತ್ತಿತ್ತು... ಆ ನಮ್ಮ ಕುಸುಮ್ನಂತು ಈ ಏಡ್ ನೇತ್ರಗಳಿಂದೆ ನೋಡಕ್ಕಾಗಲ್ಲ ಕನವ್ವ. ಆ ಎಳೆ ನಗೂನುವಿ ಈ ಎಳೆ ಚೆಲೂವ್ನುವಿ ಸೇರ್ರಿ ಬಟ್ಟಿ ಇಳ್ಸಿ ಮಾಡ್ದಂಗಿದ್ದವಳೂ... ಸಿವಸಿವಾ ಅವಳು ನಕ್ಕರೋ, ಅವಳ ಹಲ್ಲಿನ ಮ್ಯಾಗಲ ಆ ಒಂಚುಟ್ಟಿ ಸಿಂಗಲ್ಲಿನಲ್ಲೆ ಈ ಲೋಕದ ಚಲೂನೆಲ್ಲ ಆ ಭಗವಂತ್ನು ಇಟ್ಟೂ... ಆ ರತಿ ಅಂಬವಳ್ಗಿಯಾ ಅದ್ನೀಗ ಹೆಂಗಾರೂ ಮಾಡಿ ಕಿತ್ಕಂಡು ತನ್ನ ಹಲ್ಲ್‌ನ ಮ್ಯಾಕ್ಕ ಇಟ್ಟಗಬೇಕೂ ಅನ್ನಂಗ ಇದ್ದವಳೂ!...

ಸಿವಸಿವಾ!... ಇನ್ನು, ಮಕ್ಕಳನ್ನು ಸಾಕುವ ವಿಷಯದಲ್ಲಿ ಅದು ಹಾಗಲ್ಲ ಹೀಗೆ ಅಂತ ನಾನು ಏನಾದರೂ ಹೇಳಲು ಹೋದಾಗೆಲ್ಲ ನನ್ನಮ್ಮ 'ಒಟ್ಟು ಕುಟುಂಬದಲ್ಲಿ ಇದ್ದುಕೊಂಡು ಅಷ್ಟು ಕಷ್ಟಪಟ್ಟರೂ ನಮ್ಮ ಹಂಗೆ ಮಕ್ಕಳನ್ನ ಸಾಕಿದ್ದೀರ ನೀವೆಲ್ಲ?' ಎಂದು ದಬಾಯಿಸಿ ಬಾಯಿ ಮುಚ್ಚಿಸುತ್ತಿದ್ದ ಗಳಿಗೆಗಳಲ್ಲಿ ಒಂದು ಸಾರ್ತಿ ಅದ್ದೇಗೋ ನನ್ನ ವಿವೇಕಕ್ಕೆ ಈ ಮರಿಹಲ್ಲುಗಳು ಒದಗಿ ಬಂದುಬಿಟ್ಟವು. 'ಆಂ?! ಸಾಕಿರೋದ... ನನ್ನ ಈ ಹಲ್ಲು ನೋಡಿದ್ರೆ ಗೊತ್ತಾಗಲ್ವ ನೀವು ಹೇಗೆ ಸಾಕಿದೀರ ಅಂತ? ಮೊದಲಿಗೆ ಬೀಳಬೇಕಾದ ಹಲ್ಲುಗಳು ಇವು... ನೋಡಿಲ್ಲಿ...' ಅಂತ ಆ ಅವೇ ಚಿಲ್ಟಾಣಿ ಹಲ್ಲುಗಳನ್ನು– ಹನುಮಂತ ಕೂಡ ಎದೆ ಬಗೆದು ಶ್ರೀರಾಮನನ್ನು ತೋರುವಾಗ ಅಷ್ಟು ಬಲ ಪ್ರಯೋಗಿಸಿದ್ದನೋ ತಿಳಿಯೆ– ಕೆಳತುಟಿ ಎಳೆದು ತೋರಿಸಿ 'ಈಗ ಏನ್ಮಾಡೋದು ಈ ಹಲ್ಲುನ್ನ?' ಎಂದು ಜಬ್ಬರಿಸಿದೆ. ತುಟಿ ಎಳೆದ ರಭಸಕ್ಕೆ ವಸಡು ಮತ್ತು ತುಟಿ ನಡುವಿನ ಒಳಭಾಗದ ತೆಳುಮೃದು ಅಂಗಾಂಶವು ಕಿತ್ತು ಕೆಲವು ದಿನಗಳ ಕಾಲ ಭಯಂಕರ ನೋವಾಗಿದ್ದು ಇನ್ನೂ ನೆನಪಿನಲ್ಲಿದೆ. ಅದಕ್ಕೆ ಅಮ್ಮ, 'ಒಟ್ಟು ಕುಟುಂಬದ ಕಷ್ಟ ನಿಮಗೇನು ಗೊತ್ತಾಗ್ಬೇಕು? ಹಲ್ಲು ತಾನೆ... ಅನ್ನ ಅಗಿಯೋಕೆ ಬೇರೆ ಹಲ್ಲಿದಾವಲ್ಲ ಬಿಡು!' ಅಂತ ಒಮ್ಮೆಗೇ ನನ್ನ ಮುದ್ದುಹಲ್ಲುಗಳ ಅಸ್ತಿತ್ವವನ್ನೇ ಸಾರಾಸಗಟಾಗಿ ನಿವಾಳಿಸಿ ಎಸೆದು ಬಿಟ್ಟಿದ್ದಳು. 'ಹೌದೌದು ನಿಂಗೇನು... ಅಚ್ಚುಕಟ್ಟಾಗಿ ಮುತ್ತು ಪೋಣಿಸಿದ ಹಂಗೆ ಹಲ್ಲಿರೋದಕ್ಕೆ ಹಂಗಂತೀಯ, ನನ್ನ ಹಂಗೆ ಆಗಬೇಕಿತ್ತು ಗೊತ್ತಾಗ್ತಿತ್ತು' ಅಂತ ನಾನೂ ನನ್ನ ಹಲ್ಲಿನ ಮರ್ಯಾದೆ ಪ್ರಶ್ನೆಯನ್ನು ಸುಲಭಕ್ಕೆ ಬಿಟ್ಟು ಕೊಡಲಿಲ್ಲ.

ಇವೆಲ್ಲಕ್ಕೂ ಕಳಶಪ್ರಾಯವಾಗಿ ಅನ್ನೋ ಹಾಗೆ,